# ಬಾರಯ್ಯ ವೆಂಕಟರಮಣ ಭಕ್ತರ ನಿಧಿಯೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 403.
2. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 66.
3. **Note:** Lyrics given here are as per Ref. 1. The wordings in Ref. 2 are similar to Ref. 1, except few, which are given in yellow highlights. (The wordings given in yellow highlights are not in Ref. 1) This song is not available in another book that I referred.
4. **Note:** Singer has followed the lyrics as in Ref. 1.

ರಾಗ: ಸಾವೇರಿ ತಾಳ: ತ್ರಿಪುಟ

ಬಾರಯ್ಯ ವೆಂಕಟರಮಣ, ಭಕ್ತರ ನಿಧಿಯೆ, ಬಾರೋ ವಿಶ್ವಂಭರಣ || ಪ ||
ತೋರೋ ನಿನ್ನಯ ದಯ, ತೋಯಜಾಂಬಕನೆ || ಅಪ ||

ವೇದಗೋಚರ ಬಾರೋ, ಆದಿ ಕಚ್ಛಪ ಬಾರೋ
ಮೋದಸೂಕರ ಬಾರೋ, ಸದಯಾ ನರಸಿಂಹ ಬಾರೋ || 1 ||

ವಾಮನ ಭಾರ್ಗವ ಬಾರೋ, ರಾಮಕೃಷ್ಣನೆ ಬಾರೋ
ಪ್ರೇಮದ ಬುದ್ಧನೆ ಬಾರೋ, ಸ್ವಾಮಿ ಕಲ್ಕಿ ನೀ ಬಾರೋ || 2 ||

ಅರವಿಂದನಾಭ ಬಾರೋ, ಸುರರ ಪ್ರಭುವೇ ಬಾರೋ
ಪುರುಹೂತವಂದ್ಯ ಬಾರೋ ಪುರಂದರ ವಿಠಲ ಬಾರೋ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ವಿಶ್ವಂಭರಣ** = ವಿಶ್ವವ್ಯಾಪಿ (ಈಶಾವಾಸ್ಯ ಉಪ. ೧)

**ತೋಯಜಾಂಬಕ** = ಕಮಲಾಕ್ಷ

**ವೇದಗೋಚರ** = ವೇದಗಳನ್ನು ಕಂಡುಹಿಡಿದವನು,  ಮತ್ಸ್ಯಾವತಾರದಲ್ಲಿ ಶ್ರೀಹರಿಯು ಅಸುರನನ್ನು ಕೊಂದು ವೇದಗಳನ್ನು ಉದ್ಧರಿಸಿದವನು.  ಇದು ಮತ್ಸ್ಯಾವತಾರದಲ್ಲಿಯ ಕಥೆ.

**ಆದಿ ಕಚ್ಛಪ** = (ಮೂಲ ಕೂರ್ಮ) ಕೂರ್ಮಾವತಾರ

**ಮೋದಸೂಕರ** = ಜಗತ್ತಿಗೆ ಆನಂದವನ್ನುಟುಮಾಡಿದ ವರಾಹಾವತಾರ, ಹಿರಣ್ಯಾಕ್ಷನನ್ನು ಕೊಂದು ಭೂಮಿಯನ್ನು ತಿರುಗಿ ತಂದ ಪ್ರಸಂಗ (ಮೋದ = ಆನಂದ, ಸೂಕರ = ಕಾಡುಹಂದಿ)

**ನರಸಿಂಹ** = ಪರಮಾತ್ಮನ ನಾಲ್ಕನೆಯ ಅವತಾರ.

**ಸದಯ** = ಭಕ್ತರ ಮೇಲೆ ಕರುಣೆಮಾಡುವವ

**ವಾಮನ** = ಪರಮಾತ್ಮನ ಐದನೆಯ ಅವತಾರ

**ಭಾರ್ಗವ** = ಪರಮಾತ್ಮನ ಆರನೆಯ ಅವತಾರ.  ಪರಶುರಾಮಾವತಾರ

**ರಾಮ** = ಪರಮಾತ್ಮನ ಏಳನೆಯ ಅವತಾರ

**ಕೃಷ್ಣ** = ಪರಮಾತ್ಮನ ಎಂಟನೆಯ ಅವತಾರ

**ಪ್ರೇಮದ ಬುದ್ದ** = ಪರಮಾತ್ಮನ ಒಂಬತ್ತನೆಯ ಅವತಾರ.  ಕಲಿಯುಗದ ಆದಿಭಾಗದಲ್ಲಿ ದೇವದ್ವೇಷಿಗಳಲ್ಲಿ ಮೋಹವನ್ನುಂಟುಮಾಡುವುದಕ್ಕಾಗಿ ಕೀಕಟ ದೇಶದ ಮಧ್ಯ ಗಯಾ ಪ್ರದೇಶದಲ್ಲಿ ಜಿನ ಎಂಬವನ ಮನೆಯಲ್ಲಿ ಪರಮಾತ್ಮನು ಅವತರಿಸಿದ.  (ಭಾಗವತ ೧ - ೩)

**ಕಲ್ಕಿ** = ಪರಮಾತ್ಮನ ಹತ್ತನೆಯ ಅವತಾರ.  ಕಲಿಯುಗದ ಕೊನೆಗೆ ಶಂಬಳಾವತಿ ಎಂಬ

ಪಟ್ಟಣದಲ್ಲಿ ಇರುವ ವಿಷ್ಣುಯಶನೆಂಬ ಬ್ರಾಹ್ಮಣನಿಗೆ ಸುಮತಿ ಎಂಬಳಲ್ಲಿ ಜನಿಸಿ, ಕಲಿಯ ದುಷ್ಟತನದಿಂದ ಜನರೆಲ್ಲಾ ಬೇಸರಿಸಲು, ಕಲ್ಕಿಯು ಅವನನ್ನು, ಅವನ ಸೇನೆಯನ್ನೂ ಕೊಂದು ತನ್ನ ಮಹಿಮೆಯನ್ನು ತೋರಿಸಿದನು (ಭಾಗವತ ೧೨ - ೨)

**ಪುರುಹೂತ** = ಇಂದ್ರ

**Classification:** Keerthane
**Ankita:** purandara vittala

**Location:** NA
**Category:** Pooja Tatva, dashavatara
**Sub-Category:** srinivasa, bhakti, daya, veda, Narasimha, rama, Krishna, prema, buddha, kalki, sura, dashavatara,
**Pravachana:** NA
**Explanation:** NA